ಪ್ರಬಂಧ ಸ್ಪರ್ಧೆ

ಮೆಚ್ಚುಗೆ ಪಡೆದ ಪ್ರಬಂಧ

◆ ಪ್ರಸನ್ನ ಪಿ.ಬಿ.

ಕಲೆ: ಭಾವು ಪತ್ತಾರ್

# ಬಾಲ ಪ್ರತಿಭಾ ಪೀಡನ

ಸಣ್ಣ ಮಕ್ಕಳು ಆಗಷ್ಟೇ ಮಾತು, ನಡಿಗೆ ಕಲಿತವಕ್ಕೆ ತಮ್ಮ ಎಲ್ಲ ಪ್ರತಿಭೆಯನ್ನು ಪ್ರದರ್ಶಿಸುವ ಹುಮ್ಮಸ್ಸು ಸರ್ವೇ ಸಾಮಾನ್ಯ. ಆ ಮಕ್ಕಳಿಗಿಂತಲೂ ಅವರ ತಾಯಂದಿರಿಗೆ ಬಂದ ನೆಂಟರು, ಇಷ್ಟರ ಎದುರಲ್ಲಿ ಅವುಗಳನ್ನು ಪ್ರದರ್ಶಿಸುವ ಉಮೇದು ಜೋರು ಇರುತ್ತದೆ.

ಪ್ರತಿಭೆ ಎನ್ನುವುದು ಕೆಲವರ ಪ್ರಕಾರ ದೈವದತ್ತವಾದದ್ದು. ಮತ್ತೆ ಕೆಲವರ ಪ್ರಕಾರ ಸಂಸ್ಕಾರದಿಂದ ಬರುವಂಥದ್ದು. ಆಧುನಿಕ ಕಾಲಘಟ್ಟದಲ್ಲಿ ತಾಯಿ ತಂದೆಯರು ತಮ್ಮ ಮಕ್ಕಳು ಪ್ರತಿಭಾವಂತರಾಗಿದ್ದರೆ ಸಾಲದು ಅವರ ಪ್ರತಿಭೆ ಜಗತ್ತಿಗೆಲ್ಲ ತಿಳಿಯಬೇಕು ಎಂದು ಬಯಸುತ್ತಿರುತ್ತಾರೆ. ನನ್ನ ದೃಷ್ಟಿಯಲ್ಲಿ ಇದು ಒಂದು ತರಹದ ಪೀಡೆಯೇ. ಇಂಥ ಬಾಲ ಪ್ರತಿಭಾ ಪ್ರದರ್ಶನದ ಕೆಲವು ಘಟನೆಗಳು ನನಗೆ ಪೀಡನೆಯಾಗಿ ಒದಗಿ ಬಂದ ರಸ ಪ್ರಸಂಗಗಳನ್ನು ನಿಮ್ಮ ಮುಂದೆ ಇಡುತ್ತೇನೆ.

ಒಂದು ಬೆಳಿಗ್ಗೆ ಮೊಬೈಲ್ ರಿಂಗಣಿಸಿತು. ‘ಸಾರ್ ಮುಂದಿನ ವಾರ ವಲಯ ಮಟ್ಟದ ಪ್ರತಿಭಾ ಕಾರಂಜಿ ಇದೆ. ನೀವು ಜಡ್ಜಾಗಿ ಬರ್ಬೇಕು’ ಅಂತ ಆ ಕಡೆಯಿಂದ ಉಲಿಯಿತು. ಮಕ್ಕಳ ಪ್ರತಿಭಾ ಪ್ರದರ್ಶನ ನೋಡುವುದೆಂದರೆ ನನಗೆ ತುಂಬ ಖುಷಿ. ಸರಿ ಅಂತ ಒಪ್ಪಿಕೊಂಡೆ. ಇದಾಗಿ ಮರುದಿನಕ್ಕೇ ನನಗೆ ಚಿತ್ರ ವಿಚಿತ್ರದ ಕರೆಗಳು ಬರಲು ಆರಂಭವಾದವು. ‘ನಮ್ಮ ಮಗಳು ಹಾಡ್ತಾಳೆ ಸ್ವಲ್ಪ ನೋಡಿಕೊಳ್ಳಿ, ‘ನೀವೇ ಜಡ್ಜಂತೆ ನನ್ನ ಮಗನ ಏಕಪಾತ್ರಾಭಿನಯಕ್ಕೇ ಫಸ್ಟ್ ಬರ್ಬೇಕು. ನಿಮ್ಮನ್ನು ನಾವು ಚೆನ್ನಾಗಿ ನೋಡಿಕೊಳ್ತೇವೆ’ ‘ನನ್ನ ಮಗಳ ಜಾನಪದ ಹಾಡಿಗೆ ಫಸ್ಟ್ ಬರ್ಬೇಕು ಇಲ್ಲಾಂದರೆ ಗೊತ್ತಲ್ವಾ?’ ಹೀಗೆ ತರಹೇವಾರಿ ಫೋನು.!

ಏನೋ ಮಕ್ಕಳ ಪ್ರತಿಭೆಯನ್ನು ನೋಡಿ ಖುಷಿಪಡೋಣ ಅಂತ ಇದ್ದರೆ ನನ್ನ ನೆಮ್ಮದಿಯೇ ಹಾಳಾಗುವ ಲಕ್ಷಣ ಕಾಣುತ್ತಿದೆಯಲ್ಲಾ ಅಂತ ಚಿಂತೆಗೆ ಒಳಗಾದೆ. ಆದರೂ

